ಹಿಂಬಾಲಿಸಿಕೊಂಡು ಬಂದ.

'ಅಪೂರ್ವ..ಒಂದ್ನಿಮಿಷ ನಿಂತ್ಕೊಳ್ಳಿ' ಓಡು ನಡಿಗೆಯಲ್ಲಿ ಅವಳನ್ನು ಸಮೀಪಿಸಿ, 'ನಿಜಕ್ಕೂ ಐ ಆಂ ಸಾರಿ..ಪ್ಲೀಸ್' ಎಂದ ದೀನ ಸ್ವರದಲ್ಲಿ.

ಅಪೂರ್ವಳಿಗೆ ಅವನ ಮುಖವನ್ನೂ ನೋಡುವ ಆಸಕ್ತಿ ಇರಲಿಲ್ಲ. ಅವನ ಮಾತುಗಳನ್ನು ನೆನೆದು ಅವಳಿಗೆ ಮತ್ತೆ ಅಳು ಒತ್ತರಿಸಿ ಬಂದಿತ್ತು.

'ಇಷ್ಟರತನಕ, ಯಾರೂ ನನ್ನ ಮನಸ್ಸನ್ನು ಇಷ್ಟೊಂದು ನೋಯಿಸಿರಲಿಲ್ಲ.. ಡಾ.ಆದರ್ಶ..ನನಗೆ ಇನ್ನೂ ಆ ಮಾತುಗಳನ್ನು ಅರಗಿಸಿಕೊಳ್ಳಲಾಗುತ್ತಿಲ್ಲ'

'ನೋಡಿ,..ನನ್ನನ್ನು ಕ್ಷಮಿಸಿ ಎಂದು ಮಾತ್ರ ಹೇಳಬಲ್ಲೆ.. ಅಲ್ಲಿ ಸಂದರ್ಭ ನೋಡಿದಾಗ ಏನೇನೋ ಅನುಮಾನಗಳು ಬಂದವು..ನಿಮ್ಮ ತುಟಿಯೊಡೆದು ರಕ್ತ ಬರ್ತಿದೆ..ಅದಕ್ಕೆ ಮದ್ದು ಹಾಕ್ತೀನಿ..ನಡೀರಿ ಓ.ಪಿ.ಡಿ ಗೆ' ಎಂದ.

'ಆ ಗಾಯವನ್ನು ನಾನು ಸಹಿಸಬಲ್ಲೆ..ಡಾಕ್ಟರ್ ಆದ್ರೆ..ನಿಮ್ಮ ಮಾತುಗಳನ್ನು.. ನಾನು ಯಾವತ್ತು ಮರೆಯಲ್ಲ. ಅದು ಸದಾ ಮನಸ್ಸನ್ನ ಹೀಗೇ ನೋಯಿಸ್ತಾ ಇರುತ್ತೆ. ಅದಕ್ಕೇನು ಮದ್ದು ಹಚ್ತೀರಾ..?' ಅವನೆಡೆಗೆ ತೀಕ್ಷ್ಣ ನೋಟ ಬೀರಿ ಅವಳು ಲಿಫ್ಟ್‌ನತ್ತ ಹೆಜ್ಜೆ ಹಾಕಿದಾಗ ಆದರ್ಶ ಅಸಹಾಯಕನಂತೆ ನಿಂತುಬಿಟ್ಟ.

ವಾರ್ಡ್‌ನ ಬಾಗಿಲಲ್ಲೇ ನಿಂತು ಚಡಪಡಿಸುತ್ತ ನಿಂತಿದ್ದ ವಿಜಯಮ್ಮನಿಗೆ ಅಪೂರ್ವಳ ಮುಖ ಕಂಡೊಡನೇ ಸಮಾಧಾನವಾಯಿತು. 'ನಿನ್ನ ಕಳಿಸೋದು ಕಳಿಸಿ ನಾನಿಲ್ಲಿ ಭಯದಿಂದ ಸತ್ತು ಹೋದೆ..ಇಷ್ಟು ಹೊತ್ತು ಆಗಿದ್ದು ಕಂಡು ಆತಂಕವಾಯಿತು' ಎಂದವರು ಅವಳ ತುಟಿಯಿಂದ ಒಸರುತ್ತಿದ್ದ ರಕ್ತವನ್ನು ಕಂಡು ಗಾಬರಿಯಿಂದ 'ಇದೇನಾಯ್ತು ಗಾಯ..? ಹೇಗಾಯ್ತು..?'

'ಏನಿಲ್ಲ ಆಂಟಿ..ಕತ್ಲೇಲಿ ಅಂಗಳದಲ್ಲಿ ಎಡವಿ ಬಿದ್ದುಬಿಟ್ಟೆ..ಏನೋ ತಗುಲಿತು.. ನಡೀರಿ ಒಳಗೆ..ಅಂಕಲ್‌ನನ್ನು ಕಂಡು ಬಂದ್ರಾ..? ಫಾರ್ಮಸಿಯಿಂದ ಮದ್ದು ತಂದು ಕೊಡಬೇಕಾಗಿತ್ತ..?'

'ಹೌದು..ನಿನ್ನೇ ಕಾಯ್ತಿದ್ದೆ..ಒಮ್ಮೆ ಐ.ಸಿ.ಯು. ಕಡೆ ಹೋಗ್ಬರ್ತೀಯಾ..?' ಎಂದರು. ಅವರೆದುರು ನಿಲ್ಲದೇ ಐ.ಸಿ.ಯುನತ್ತ ಹೊರಟ ಅಪೂರ್ವಳ ಮನಸ್ಸು ಪ್ರಕ್ಷುಬ್ಧವಾಗಿತ್ತು.

* * *

## ಮನನೋಯಿಸಿದ ಆದರ್ಶನ ಮಾತು

ಮರುದಿನ ಬೆಳಿಗ್ಗೆ ಅಪೂರ್ವ ತನ್ನ ಮೊಬೈಲನ್ನು ಅವಲೋಕಿಸುವಾಗ ಅದರಲ್ಲಿ ಆದರ್ಶನ ಸಂದೇಶವಿರುವುದನ್ನು ಕಂಡು ಅದನ್ನು ತೆರೆದು ನೋಡಿದಳು,'ನನ್ನನ್ನು ಕ್ಷಮಿಸು..' ಎಂದು ಬರೆದಿತ್ತು.

ಅದಕ್ಕೆ ಪ್ರತಿಕ್ರಿಯಿಸುವ ಆಸಕ್ತಿ ಅಪೂರ್ವ ತೋರಲಿಲ್ಲ. ಅವನು ಮೊದಲ ಪರಿಚಯದಲ್ಲೇ ತನ್ನ ಗೌರವವನ್ನು ಕಳೆದುಕೊಂಡಂತಾಗಿತ್ತು. ಆದರ್ಶ ತನ್ನನ್ನು ಎಷ್ಟೊಂದು ಅಲ್ಪವಾಗಿ ಪರಿಗಣಿಸಿ ಬಿಟ್ಟ..ಕಳ್ಳಿಯ ಪಟ್ಟ ಕಟ್ಟುವಷ್ಟು ಅವನ ದೃಷ್ಟಿಯಲ್ಲಿ ತಾನು ಕೀಳಾಗಿ ಹೋದೆನಲ್ಲ.. ಅಪೂರ್ವಳ ಮನಸ್ಸು ಅವನ ಮಾತುಗಳನ್ನು ಕ್ಷಣಕ್ಷಣಕ್ಕೆ ನೆನೆದು ಉರಿಯಿತ್ತಿತ್ತು. ಹಿಂದಿನ ದಿನ ನಡೆದ ಆ ಎರಡು ಘಟನೆಗಳು ಅವಳನ್ನು ತೇಜೋವಧೆ ಮಾಡಿ, ರಾತ್ರಿಯಿಡೀ ನಿದ್ದೆಯಿಲ್ಲದಂತೆ ಮಾಡಿತ್ತು.

ಬೆಳಿಗ್ಗೆ ಕ್ಯಾಂಟೀನಿನಿಂದ ತನಗೆ ಮತ್ತು ವಿಜಯಮ್ಮನಿಗೆ ಉಪಾಹಾರ ಕಟ್ಟಿಸಿಕೊಂಡು ವಾರ್ಡ್‌ಗೆ ಬಂದಾಗ ಅಪೂರ್ವಳ ಕಾಲುಗಳು ಬಾಗಿಲಲ್ಲೇ ಸ್ಥಗಿತಗೊಂಡವು. ಆದರ್ಶ, ಬಾಗಿಲ ಕಡೆಗೆ ಬೆನ್ನು ಮಾಡಿ ವಿಜಯಮ್ಮನೊಂದಿಗೆ ಮಾತನಾಡುತ್ತಿದ್ದ.

'ಸೂರ್ಯನ ಪಾಡು ಏನಾಯಿತು ಅಂತ ನೀನು.. ನನಗೋಸ್ಕರ ವಿಚಾರಿಸ್ತೀಯಾ.. ಆದರ್ಶ..? ನಿನ್ನೆ ತೊಂದ್ರೆ ಕೊಡ್ತಿದ್ದೀನಿ ಅಂತ ತಪ್ಪು ತಿಳಿಯ ಬೇಡ. ವರ್ಷಗಳ ನಂತರ ಮನೆಗೆ ಬಂದಿರುವ ಮಗನನ್ನು ಕಳೆದು ಕೊಳ್ಳೋದು ಬೇಡಾ ಅಂತ..ಅಷ್ಟೇ..ನನಗೆ ಒಬ್ಬೇ ತಿರುಗಾಡಿ ಗೊತ್ತಿಲ್ಲ.. ಅಪೂರ್ವಳನ್ನು ಒಬ್ಬಿಗೇ ಪೋಲಿಸ್ ಠಾಣೆಗೆ ಕಳಿಸಲು ನನಗೆ ಇಷ್ಟವಿಲ್ಲ' ವಿಜಯಮ್ಮ ಆದರ್ಶನ ಮುಂದೆ ವಿನಂತಿಸಿಕೊಳ್ಳುವುದನ್ನು ಆಲಿಸಿ ಅಪೂರ್ವಳ ಮುಖ ವಿವರ್ಣಗೊಂಡಿತು.

**ಅಧ್ಯಾಯ 8**

'ಇಷ್ಟು ವರ್ಷಗಳು ಅವನನ್ನು ಕಳ್ಕೊಂಡು ಹೇಗಿದ್ನೋ ..ಆ ಪರಮಾತ್ಮನಿಗೇ ಗೊತ್ತು..! ಇನ್ನಂತೂ ಅವನನ್ನು ಬಿಟ್ಟಿರೋ ಶಕ್ತಿ ನನಗಿಲ್ಲ..ಸಾಯೋ ಕಾಲಕ್ಕಾದರೂ ಮಗ ಕಣ್ಣೆದುರು ಇರಲಿ.. ಅವನನ್ನು ಸರಿ ದಾರಿಗೆ ತರಬೇಕೂಂತ ನನ್ನಾಸೆ..ಅವ್ನು ದೂರ ಇದ್ರೆ ಹಾಳಾಗ್ತಾನೆ..ಆದರ್ಶ..ನನ್ನ ಈ ಕೆಲಸ ಮಾಡ್ತೀಯಾಪ್ಪಾ..?'

ಅಪೂರ್ವಳ ಹೃದಯ ಆತಂಕದಿಂದ ಜೋರಾಗಿ ಹೊಡೆದುಕೊಂದಿತು.

ಆದರ್ಶ ಹಿಂದಿನ ದಿನದ ಘಟನೆ ವಿಜಯಮ್ಮನ ಮುಂದೆ ಹೇಳಿಬಿಟ್ಟರೆ..! ಆ ತಾಯಿ ಹೃದಯಕ್ಕೆ ಎಷ್ಟೊಂದು ನೋವಾಗಬೇಡಾ..? ಮಗನ ಮೇಲೆ ಮೋಹದ ಹುತ್ತವನ್ನೇ ಕಟ್ಟಿಕೊಂಡಿರುವ ವಿಜಯಮ್ಮನಿಗೆ, ತಾನು ಆತನನ್ನು ಮನೆಯಲ್ಲಿ ಕೂಡಿ ಹಾಕಿ ಬಂದಿದ್ದೆ ಎಂದರೆ ತನ್ನ ಮೇಲೂ ಮುನಿಸು ತೋರಿಸಬಹುದು..ಆದರ್ಶ ಅದನ್ನೆಲ್ಲಾ ಹೇಳದಿದ್ದರೆ ಸಾಕು.. ಎಂದು ಬಾಗಿಲಲ್ಲೇ ನಿಂತು ತಳಮಳಿಸಿದಳು.

'ಖಂಡಿತಾ ಅತ್ತೇ..ಇವತ್ತು ಡ್ಯೂಟಿ ಮುಗಿದ ತಕ್ಷಣ ನಾನು ಆ ಪೋಲಿಸ್ ಠಾಣೆಗೆ ಹೋಗಿ ವಿಚಾರಿಸಿ ನಿಮ್ಗೆ ಖಂಡಿತಾ ತಿಳಿಸ್ತೀನಿ..ನೀವು ಚಿಂತಿಸಬೇಡಿ..!' ಎಂದ.

ಆದರ್ಶನ ಮಾತುಗಳನ್ನು ಆಲಿಸಿ ಅಪೂರ್ವ ನಿರಾಳವಾಗಿ ಉಸಿರಾಡುವಂತಾಗಿತ್ತು. ವಿಜಯಮ್ಮನ ನೋಟ ಆದರ್ಶನ ಹಿಂದೆ ಬಾಗಿಲಲ್ಲಿ ನಿಂತಿದ್ದ ಅಪೂರ್ವಳತ್ತ ಹರಿಯಿತು.

'ಬಾ ಅಪೂರ್ವ..ಅದ್ಯಾಕೆ ಅಲ್ಲೇ ನಿಂತೆ..?'

ಕತ್ತು ತಿರುಗಿಸಿ ನೋಡಿದ ಆದರ್ಶ, ಅವಳಿಗೆ ದಾರಿ ಮಾಡಿ ಕೊಡುತ್ತ ಹಿಂದೆ ಸರಿದು ನಿಂತ. ಅಪೂರ್ವ ಒಳ ಬಂದು ತಾನು ತಂದ ಉಪಾಹಾರವನ್ನು ವಿಜಯಮ್ಮನಿಗೆ ನೀಡಿದಳು.

'ನಿನ್ನ ತುಟಿ ಊದಿ ನೀಲಿಗಟ್ಟಿದೆಯಲ್ಲೇ..ಸೆಪ್ಟಿಕ್ ಆಗುತ್ತೋ ಏನೋ.. ಜೋರಾಗಿ ತಗುಲಿರಬೇಕು..ಏನಾದ್ರೂ ಮದ್ದು ತಗೋಬೇಕಿತ್ತು' ಅಪೂರ್ವಳ ಊದಿಕೊಂಡಿದ್ದ ಕೆಳ ತುಟಿಯನ್ನು ನೋಡುತ್ತ ಪೇಚಾಡಿಕೊಂಡ ವಿಜಯಮ್ಮ, ಅಲ್ಲೇ ನಿಂತು ಗಮನಿಸುತ್ತಿದ್ದ ಆದರ್ಶನಿಗೆ, 'ಆದರ್ಶ..ನಿನ್ನೆ ರಾತ್ರೆ ಮನೆ ಅಂಗಳದಲ್ಲಿ ಕಲ್ಲು ಎಡವಿ ಬಿದ್ದು ತುಟಿಗೆ ಗಾಯ ಮಾಡಿ ಕೊಂಡಿದ್ದಾಳೆ.. ಅವ್ಳಿಗೇನಾದರೂ ಮದ್ದು ಕೊಡಪ್ಪಾ,..ಎಷ್ಟು ನೋಯ್ತಿದೆಯೋ ಏನೋ..! ಆ ಹುಡ್ಗೀ ಬಾಯಿ ಬಿಟ್ಟು ಏನೂ ಹೇಳೋದೇ ಇಲ್ಲ' ಎಂದರು.

'ನಡೀರಿ..ಅಪೂರ್ವ..ಮದ್ದು ಕೊಡ್ತೇನೆ..ಇಲ್ದಿದ್ರೆ..ಗಾಯ ತುಂಬಾ ಜೋರಾಗಿ ಅನಾಹುತವಾಗುತ್ತೆ' ಎಂದ ಗಂಭೀರವಾಗಿ. ಅಪೂರ್ವಳಿಗೆ ಅವನ ಮಾತಿನಿಂಗಿತ ಅರಿವಾಗಿತ್ತು. ಅವನೊಡನೆ ಹೋಗಲು ಇಷ್ಟಪಡದೆ ನಿಂತಲ್ಲೇ ಚಡಪಡಿಸಿದಾಗ ವಿಜಯಮ್ಮ, ಆಗ್ರಹಿಸುತ್ತ,

'ಹೋಗಮ್ಮಾ..ಅವ್ನೇನು ಹೊರಗಿನವ್ನಾ..? ಅಲ್ದೇ ಡಾಕ್ಟರ್ ಬೇರೆ..ಮದ್ದು ತಗೊಳ್ದೇ ಇದ್ರೆ ಗಾಯ ವಾಸಿಯಾಗೋದು ಹೇಗೆ..?' ಎಂದರು.

ಅಪೂರ್ವ ಒಲ್ಲದ ಮನದಿಂದಲೇ ಅವನ ಹಿಂದೆ ಹೆಜ್ಜೆ ಹಾಕಿದಳು. ತನ್ನ ಮಾತುಗಳಿಂದ ಅವಳ ಮನಸ್ಸಿಗಾದ ನೋವು ಆದರ್ಶನನ್ನೂ ವಿಚಲಿತ ಗೊಳಿಸಿತ್ತು. ಕೋಟಿನ ಜೇಬಿನೊಳಗೆ ಕೈ ತೂರಿಸಿಕೊಂಡು ಕಾರಿಡಾರ್‌ನ ಉದ್ದಕ್ಕೂ ನಡೆದು ಬಂದ ಆದರ್ಶ ತನ್ನ ಪಕ್ಕದಲ್ಲಿ ಬರುತ್ತಿದ್ದ ಅಪೂರ್ವಳ ಮುಖಭಾವವನ್ನು ಅಳೆಯುವಂತೆ ವಾರೆಗಣ್ಣಿನಲ್ಲಿ ನೋಡಿದ. ಅವಳ ಮುಖದಲ್ಲಿ ಅಸಮಾಧಾನ ಎದ್ದು ಕಾಣುತ್ತಿತ್ತು. ಅವಳ ಮನೋಭಾವ ಅರಿತವನಂತೆ ನುಡಿದ,'ನನ್ನ ಮಾತುಗಳು ನಿಮ್ಮ ಮನಸ್ಸಿಗೆ ತುಂಬಾ ನೋವು ಕೊಟ್ಟಿದೆ ಎಂದು ನಾನು ಬಲ್ಲೆ..ಆಡಿದ ಮಾತುಗಳನ್ನು ಹಿಂಪಡೆಯಲಂತೂ ಸಾಧ್ಯವಿಲ್ಲ.. ಆದರೂ ಆಗಿನ ಪರಿಸ್ಥಿತಿ ಹಾಗಿತ್ತು..ಅಲ್ಲಿನ ಸಂದರ್ಭ ನೀವು ಊಹಿಸಿಕೊಳ್ಳಿ..ನನ್ನ ಜಾಗದಲ್ಲಿ ನೀವಿದ್ದರೂ ನನ್ನಂತೆ ಭಾವಿಸುತ್ತಿದ್ದರೋ ಏನೋ..ಆದರೂ ಮತ್ತೊಮ್ಮೆ ಕ್ಷಮಿಸಿ ಎಂದು ಮನಃಪೂರ್ವಕವಾಗಿ ಕ್ಷಮೆ ಯಾಚಿಸುತ್ತೇನೆ..' ಆದರ್ಶ ವಿನಮ್ರವಾಗಿ ನುಡಿದ.

ಅವನ ಪ್ರತೀ ಮಾತು ಅವಳು ಮನದಲ್ಲೇ ವಿಮರ್ಶಿಸಿದಾಗ ಅವನ ಮಾತುಗಳು ಪ್ರಾಮಾಣಿಕವಾಗಿ ತೋರಿತು. ತಾನೇ ಅತಿರೇಕವಾಗಿ ವರ್ತಿಸಿದೆನೇನೋ ಎಂದು ಅವಳಿಗೂ ತೋರಿತು.

**(ಸಶೇಷ)**